**CC 1049/2022**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ**
**ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**
**ಸಿಸಿ ನಂಬರ್** 1049/2022

**ಸಿ ಡಬ್ಲ್ಯೂ** -6
**ಪಿ ಡಬ್ಲ್ಯೂ** -5

**ಸಾಕ್ಷಿಯ ಹೆಸರು -** **ಯಮುನಾ**
**ಗಂಡನ ಹೆಸರು -** **ನಂದೀಶ್**
**ವಯಸ್ಸು -** 35 **ವರ್ಷಗಳು**
**ಉದ್ಯೋಗ -** **ವ್ಯವಸಾಯ**
**ವಾಸಸ್ಥಳ -** **ಸೋವೆನಹಳ್ಳಿ, ಕೂಡ್ಲಿಗಿ ತಾಲ್ಲೂಕು**

**ಸಾಕ್ಷಿಯನ್ನು ದಿನಾಂಕಃ** 23-07-2026 **ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎ. ಪಿ. ಪಿ. ಅವರಿಂದ**

ಚಾಸಾ-**1** ಮತ್ತು **5** ನನ್ನ ತಂಗಿಯರು, ಚಾಸಾ **-4** ನನ್ನ ತಾಯಿ, ಚಾಸಾ **-7** ನನ್ನ ಗಂಡ.

ಚಾಸಾ **-1** ಮತ್ತು ಆರೋಪಿ ಒಬ್ಬರನೊಬ್ಬರು ಪ್ರೀತಿಸಿ ಮದುವೆಯಾಗುವುದಾಗಿ ತಿರ್ಮಾನಿಸಿದ್ದರು. ನನ್ನ ತಂಗಿಗೆ ನಮ್ಮ ಮನೆಯವರು ಆರೋಪಿ ನಡುವಳಿಕೆ ಸರಿಯಿಲ್ಲ ಮದುವೆ ಬೇಡ ಎಂದು ತಿಳಿಸಿದ್ದರು. ಚಾಸಾ **-1** ರವರು ಅವರ ಮಾತು ಕೇಳಿ ಆರೋಪಿ ನಿಶ್ಚಿತಾರ್ಥದ ಸಂದರ್ಭದಲ್ಲಿ ನೀಡಿದ್ದ ಸೀರೆಯನ್ನು ಆತನಿಗೆ ಹಿಂತಿರುಗಿಸಿ ಬಂದಿದ್ದು. ಅದಾದ ನಂತರ ಆರೋಪಿ ಮನೆಗೆ ಬಂದು ಚಾಸಾ **-1** ರವರ ಕಾಲಿಗೆ ಬಿದ್ದು ಮದುವೆ ಮಾಡಿಕೊಳ್ಳುವಂತೆ ಕೇಳಿಕೊಂಡಿದ್ದರಿಂದ ನಾವುಗಳು ಮದುವೆ ಮಾಡಲು ಒಪ್ಪಿದ್ದೇವು.

ನನ್ನ ತಂಗಿಯ ಮದುವೆ ಆರೋಪಿಯೊಂದಿಗೆ ದಿಃ **07-10-2020** ರಂದು ಮಾರಾನಾಥ್ ಚರ್ಚ್ ನಲ್ಲಿ ಆಗಿತ್ತು. ಚಾಸಾ **-1** ರವರು ಮದುವೆಯ ನಂತರ ಆರೋಪಿಯ ಹೊಸಲಿಂಗಾಪುರದ ಮನೆಗೆ ಹೋಗಿ ಸಂಸಾರ

ಮಾಡಿರುತ್ತಾಳೆ. ಸದರಿ ಮನೆಯಲ್ಲಿ ಆರೋಪಿ ಕುಡಿದು ಬಂದು ಚಾಸಾ -1 ರವರಿಗೆ ಹೊಡೆ ಬಡೆ ಮಾಡುವುದು ಮತ್ತು ಬೈಯುವುದು ಮಾಡಿರುತ್ತಾನೆ. ಅದೇ ರೀತ ಮನೆಗೆ ಬೇರೆ ಗಂಡಸರನ್ನು ಕಳುಹಿಸುವುದು ಮತ್ತು ಅವರೊಂದಿಗೆ ಇರು ಎಂದು ಚಾಸಾ -1 ರವರಿಗೆ ಪೀಡಿಸಿರುವುದು ಇರುತ್ತದೆ. ಚಾಸಾ -1 ರವರಿಗೆ ಕಿರುಕುಳ ಆಗುತ್ತಿರುವುದನ್ನು ಕಂಡು ಚಾಸಾ -4 ರವರು ಆಕೆಯನ್ನು ಹೊಸಪೇಟೆಯ ನಮ್ಮ ತವರು ಮನೆಗೆ ಕರೆದುಕೊಂಡು ಬಂದಿದ್ದರು.

ಆರೋಪಿ **3-4** ಬಾರಿ ರಾತ್ರಿ ಹೊತ್ತು ನಮ್ಮ ಮನೆಯ ಹತ್ತಿರ ಬಂದು ಗಲಾಟೆ ಮಾಡಿರುತ್ತಾನೆ. ಆರೋಪಿ 1 ನೋಟಿಸ್ ಅನ್ನು ಸಹ ಚಾಸಾ -1 ರವರಿಗೆ ನೀಡಿದ್ದ. ನೋಟಿಸ್ ನೀಡಿದ ನಂತರವೂ ಆರೋಪಿ ಪುನಃ ನಮ್ಮ ಮನೆಗೆ ಬಂದು ಜಗಳ ತೆಗೆದಿರುತ್ತಾನೆ. ನಾವುಗಳು ಹೆಣ್ಣು ಮಕ್ಕಳಾಗಿದ್ದರಿಂದ ಆರೋಪಿಯ ಕಿರುಕುಳ ತಾಳದೇ ಆತನ ವಿರುದ್ಧ ಪೋಲಿಸರಿಗೆ ದೂರನ್ನು ನೀಡಿರುತ್ತೇವೆ. ನಾನು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಮಾನ್ಯ ಎ.ಪಿ.ಪಿ. ಅವರು ಅನುಮತಿ ಕೇಳಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲು ಮಾನ್ಯ ಎ ಪಿ ಪಿ ಅವರಿಂದಃ**

ಚಾಸಾ -1 ರವರಿಗೆ ಬೇರೆ ಗಂಡಸರೊಂದಿಗೆ ಇರದಿದ್ದರೆ ಜೀವಸಹಿತ ಬಿಡುವುದಿಲ್ಲ ಎಂದು ಆರೋಪಿ ಪ್ರಾಣ ಬೆದರಿಕೆ ಹಾಕಿದ್ದ ಅಂದರೆ ಸರಿ. ಆರೋಪಿ ಚಾಸಾ -1 ರವರಿಗೆ ಹೊಡೆ ಬಡೆ ಮಾಡಿ ಬೈಯುತಿತದ್ದ ಅಂದರೆ ಸರಿ.

**ಪಾಟೀ ಸವಾಲು ಆರೋಪಿ ಪರ ಶ್ರೀ ಆರ್ ಸಿ ಎನ್ ವಕೀಲರಿಂದಃ**

ಚಾಸಾ -1 ನನ್ನ ತಂಗಿ. ಚಾಸಾ -7 ನನ್ನ ಗಂಡ. ದೂರು ನೀಡಲು ನನ್ನ ಗಂಡನೇ ಮಾಹಿತಿ ನೀಡಿದ್ದ ಅಂದರೆ ಸರಿ. ಆರೋಪಿ ಹೊಸಲಿಂಗಾಪುರದ ಮನೆಗೆ ಕರೆದುಕೊಂಡು ಬರುತಿತದ್ದ ಎನ್ನಲಾದ ಸ್ನೇಹಿತರ ಹೆಸರುಗಳು ನನಗೆ ಗೊತಿತಲ್ಲ. ಚಾಸಾ -1 ರವರು ಸದರಿ ಗಂಡಸರ ವಿರುದ್ದ ಸಂಬಂಧ ಪಟ್ಟ ಪೋಲಿಸ್ ಠಾಣೆಯಲ್ಲಿ ದೂರು ನೀಡಿರುವುದಿಲ್ಲ. ಆರೋಪಿ ತೊಂದರೆ ನೀಡುತ್ತಿದ್ದಾನೆ ಎಂದು ತಿಳಿದ ನಂತರ ನಾವುಗಳು ಚಾಸಾ **-1** ರವರ ಮನೆಗೆ ಹೋಗಿ ಅಲ್ಲಿ ಇರಲಿಲ್ಲ. ಆರೋಪಿಯ ಅಭ್ಯಾಸಗಳೆಲ್ಲಾ ಚಾಸಾ **-1** ರವರಿಗೆ ಮದುವೆಗೂ ಮೊದಲೆ ಗೊತ್ತಿದ್ದವು ಅಂದರೆ ಸರಿ. ಹೊಸಲಿಂಗಾಪುರದಲ್ಲಿ ಆರೋಪಿ ಕಿರುಕುಳ ನೀಡಿರುತ್ತಾನೆ ಎಂದು ಚಾಸಾ **-1** ರವರು ಪೋಲಿಸರಿಗೆ ದೂರು ನೀಡಿಲ್ಲ.

ಸಿದ್ದಲಿಂಗಪ್ಪ ಚೌಕಿ ಹತ್ತಿರದ ನನ್ನ ತಾಯಿಯ ಮನೆ ಬಳಿ ಆರೋಪಿ ಗಲಾಟೆ ಮಾಡಿರುವುದನ್ನು ನಾನು ನೋಡಿರುವುದಿಲ್ಲ. ಸದರಿ ಗಲಾಟೆ ಆಗಿದ್ದನ್ನು ಮೊಬೈಲ್ನಲ್ಲಿ ವಿಡಿಯೊ ಮಾಡಿ ನನಗೆ ತೋರಿಸಿರುತ್ತಾರೆ. ಸದರಿ ವಿಡಿಯೋ ಪೋಲಿಸರಿಗೆ ನೀಡಿಲ್ಲ. ಆರೋಪಿ ಚಾಸಾ **-1** ರವರಿಗೆ ಯಾವುದೇ ರೀತಿಯ ಹಿಂಸೆ ನೀಡಿಲ್ಲ ಅಂದರೆ ಸರಿಯಲ್ಲ. ಆರೋಪಿ ಮನೆಯ ಹತ್ತಿರ ಕುಡಿದು ಬಂದು ಚಾಸಾ **-1,4** ಮತ್ತು **5** ರವರಿಗ ಬೈದು ಜಗಳ ಮಾಡಿರುತ್ತಾನೆ ಎಂದು ಸುಳ್ಳು ನುಡಿಯುತಿತದ್ದೇನೆ ಅಂದರೆ ಸರಿಯಲ್ಲ.

ನನ್ನ ತಂಗಿ ಜೀವನಾಂತ ಕೋರಿ ಅಶಜಿ ಸಲ್ಲಿಸಿರುತ್ತಾರೆ ಅಂದರೆ ಸರಿ. ಸದರಿ ಜೀವನಾಂಶ ಪ್ರಕರಣದಲ್ಲಿ ಅನುಕೂಲವಾಗಲಿ ಎಂದು ಚಾಸಾ -1 ರವರು ಈ ಪ್ರಕರಣದ ದೂರನ್ನು ನೀಡಿದ್ದರು ಅಂದರೆ ಸರಿಯಲ್ಲ. ಆರೋಪಿ ಚಾಸಾ **-1** ರವರ ಮೇಲಿನ ಪ್ರಿತಿಯಿಂದಲೇ ದೀ **15-02-2022** ರಂದು ನೋಟಿಸ್ ನೀಡಿದ್ದ

ಅಂದರೆ ಸರಿಯಲ್ಲ. ಆರೋಪಿ ಚಾಸಾ **-1** ರವರೊಂದಿಗೆ ಸಂಸಾರ ಮಾಡುವ ಉದ್ದೇಶದಿಂದಲೇ ನೋಟಿಸ್ ನೀಡಿದ್ದ ಅಂದರೆ ಸರಿಯಲ್ಲ. ಆರೋಪಿ ಯಾವುದೇ ಸ್ನೇಹಿತರನ್ನು ಆತನ ಮನೆಗಾಗಲೀ ನನ್ನ ತಾಯಿಯ ಮನೆಗಾಗಲೀ ಕರೆದುಕೊಂಡು ಬಂದಿರಲಿಲ್ಲ, ಚಾಸಾ **-1** ರವರಿಗಾಲೀ, ಚಾಸಾ **-4** ಮತ್ತು **5** ರವರಿಗಾಗಲೀ ಹೊಸಪೇಟೆಯಲ್ಲಿ ಯಾವುದೇ ಕಿರುಕುಳ ನೀಡಿಲ್ಲ ಅಂದರೆ ಸರಿಯಲ್ಲ. ಜೀವನಾಂತದ ಪ್ರಕರಣದಲ್ಲಿ ನನ್ನ ತಂಗಿಗೆ ಅನುಕೂಲವಾಗಲೀ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

**(**ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)**

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.